**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 53/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.06**

**ದಿನಾಂಕಃ** 04.09.2025 **ಸಿಡಬ್ಲ್ಯೂ.06**

| | |
|---|---|
| ಹೆಸರು | ಸಂದೀಪ್ ಎಸ್ |
| ತಂದೆ ಹೆಸರು | ಶಿವಸ್ವಾಮಿ ಎಸ್ ಬಿ |
| ವಯಸ್ಸು | 34 ವರ್ಷ |
| ಉದ್ಯೋಗ | ಡಿಪೋ ಮ್ಯಾನೇಜರ್ |
| ವಾಸ ಸ್ಥಳ | ಮಂಗಳೂರು |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ರವರ ಪರಿಚಯವಿದೆ. ಚಾಸಾ.4 ರವರ ಪರಿಚಯವಿದೆ. ದಿಃ 11.09.2023 ರಂದು ಚಾಸಾ.1 ರವರು ಚಾಲಕರಾಗಿ ಚಾಸಾ.4 ರವರು ನಿರ್ವಾಹಕರಾಗಿ ವಾಹನ ಸಂಖ್ಯೆ ಕೆಎ 17 ಎಫ್ 1925 ರ ಮಾರ್ಗ ಸಂಖ್ಯೆ 113-114 ರ ಹರಿಹರ ಶಿವಮೊಗ್ಗ ಮಾರ್ಗಕ್ಕೆ ನೇಮಕಗೊಂಡಿದ್ದರು. ಸದರಿ ಬಸ್ ಮದ್ಯಾಹ್ನ 3.53 ಗಂಟೆಗೆ ಬಸ್ ಹರಿಹರ ಬೈಪಾಸ್ ರಸ್ತೆ ಗಣೇಶ ಬಾರ್ ಎದುರು ಇದ್ದಾಗ ಇಬ್ಬರು ಬೈಕ್ ಮೇಲೆ ಬಂದು ನಮ್ಮ ವಾಹನವನ್ನು ಅಡ್ಡಗಟ್ಟಿದ್ದು ಸದರಿಯವರನ್ನು ಚಾಸಾ.1 ರವರ ವಿಚಾರಿಸಿದಾಗ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಮ್ಮ ವಾಹನದ ಬಾಗಿಲ ಕಿಟಕಿಯನ್ನು ಒಡೆದು ಚಾಲಕನನ್ನು ಕೆಳಗೆ ಇಳಿಸಿಕೊಂಡು ತಮ್ಮ ಕೈಗಳಿಂದ ಚಾಲಕನ ಮುಖಕ್ಕೆ ಮತ್ತು ಬಾಯಿಗೆ ಹೊಡೆದಿರುತ್ತಾರೆ. ಚಾಸಾ.1 ರವರು ಚಾಸಾ.4 ರವರೊಂದಿಗೆ ಹರಿಹರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನನಗೆ ಚಾಸಾ.4 ರವರು ಕರೆ ಮಾಡಿ ತಿಳಿಸಿದ್ದು ನಾನು ಮತ್ತು ಚಾಸಾ.7 ರವರು ಆಸ್ಪತ್ರೆಗೆ ಹೋದಾಗ ಎಲ್ಲಾ ವಿಚಾರ ತಿಳಿಯಿತು. ನಾವು ಆಸ್ಪತ್ರೆಗೆ ಹೋಗಿ ನೋಡಿದಾಗ ಚಾಸಾ.1 ರವರ ಮುಖದಿಂದ ಮತ್ತು ಬಾಯಿಂದ ರಕ್ತ ಬರುತ್ತಿತ್ತು ಮತ್ತು ವೈದ್ಯರು ಚಿಕಿತ್ಸೆ ಮಾಡುತ್ತಿದ್ದರು. ಹಲ್ಲೆ ಮಾಡಿದ ವ್ಯಕ್ತಿಗಳ ಬಗ್ಗೆ ವಿಚಾರಿಸಲಾಗಿ ಸದರಿಯವರ ಹೆಸರು ಕೌಶಿಕ್ ಮತ್ತು ದರ್ಶನ್ ಎಂದು ತಿಳಿಯಿತು. ಸದರಿಯವರು ಸ್ಥಳಕ್ಕೆ ತಮ್ಮ ಯಮಹಾ ಬೈಕ್ ಕೆಎ/17 ಹೆಚ್ 1917 ನಲ್ಲಿ ಬಂದರು. ಚಾಸಾ.1 ರವರು ಅರ್ಧ ಗಂಟೆ ಕಾಲ ಚಿಕಿತ್ಸೆ ಪಡೆದು ಸಂಜೆ 5.30 ಗಂಟೆಗೆ ಠಾಣೆಗೆ ಹೋಗಿ ದೂರು ನೀಡಿರುತ್ತಾರೆ. ಈ ಎಲ್ಲಾ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವೈ ಹೆಚ್ ಡಿ ವಕೀಲರಿಂದಃ**

ನನಗೆ ಘಟನೆಯ ಬಗ್ಗೆ ಚಾಸಾ.1 ಮತ್ತು 4 ರವರ ಮುಖಾಂತರ ತಿಳಿದಿರುತ್ತದೆ ಎಂದರೆ ಸರಿ. ಘಟನೆ ಕುರಿತು ನಾನು ಸ್ಥಳದಲ್ಲಿ ಸಾರ್ವಜನಿಕರಿಂದ ಯಾವುದೇ ಮಾಹಿತಿ ಪಡೆದಿಲ್ಲ. ಚಾಸಾ.1 ಮತ್ತು 4 ರವರು

ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಅನುಕೂಲವಾಗಲಿ ಎಂದು ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ